## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 1595 / 2024

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ1

ದಿನಾಂಕಃ **27-11-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ನಾಗಮ್ಮ |
| ಗಂಡನ ಹೆಸರು | - | ಹೆಚ್.ಆರ್. ಬಾಲಕೃಷ್ಣ |
| ವಯಸ್ಸು | - | **57** ವರ್ಷ |
| ಉದ್ಯೋಗ | - | ಆರಕ್ಷಕ ಉಪ ನಿರೀಕ್ಷಕರು ಡಿ.ಎಸ.ಪಿ. ವಿಭಾಗ ಅಧಿಕ್ಷಕರ ಕಚೇರಿ, ಯಾದಗಿರಿ |
| ವಾಸಸ್ಥಳಃ | - | ಯಾದಗಿರಿ |

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ದಿನಾಂಕ 03.08.2024 ರಿಂದ ಇಲ್ಲಿಯವರೆಗೆ ನಾನು ಆರಕ್ಷಕ ಉಪ ನಿರೀಕ್ಷಕರು ಡಿ.ಎಸ.ಪಿ. ವಿಭಾಗ ಅಧಿಕ್ಷಕರ ಕಚೇರಿ, ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 21.08.2024 ರಂದು ಸಂಜೆ 07.00 ಗಂಟೆಗೆ ಮಾನ್ಯ ಅಧೀಕ್ಷಕರವರು ನನಗೆ ಕರೆದು ಯಾದಗಿರಿ ನಗರದ ಶಿವನಗರದಲ್ಲಿ ಮಟಕಾ ಆಡುತ್ತಿದ್ದಾರೆಂದು ನನಗೆ ಮಾಹಿತಿ ಬಂದಿದೆ ನೀವು ಅಲ್ಲಿಗೆ ನೀವು ಹೋಗಿ ಎಂದು ಮೌಖಿಕ ಆದೇಶ ಮಾಡಿದ್ದರು. ನಂತರ ನಾನು ನನ್ನ ವಿಭಾಗಕ್ಕೆ ಬಂದು ಚಾಸಾ-6 ರವರಿಗೆ ಎರಡು ಜನ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದೆ ಆ ಪ್ರಕಾರ ಅವರು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದರು. ನಂತರ ನಾನು ಹಾಗೂ ಚಾಸಾ-2 ಮತ್ತು 3 ರವರಿಗೆ ಮಾಹಿತಿ ಬಂದ ವಿಷಯವನ್ನು ತಿಳಿಸಿದ್ದೆ. ಅವರು ಪಂಚರಾಗಲು ಒಪ್ಪಿಕೊಂಡರು. ರಾತ್ರಿ 08.00 ಗಂಟೆಗೆ ನಾನು ಹಾಗೂ ಚಾಸಾ-2 ರಿಂದ 6 ರವರು ಕೂಡಿ ನಮ್ಮ ಕಚೇರಿಯ ಜೀಪ್ ನಂ. ಕೆಎ-33-ಜಿ-0239 ನೇದ್ದರ ಮೂಲಕ ರಾತ್ರಿ 08.10 ಗಂಟೆಗೆ ವಾತ್ಸಲ್ಯ ಆಸ್ಪತ್ರೆಗೆ ಹೋಗಿದ್ದೆವು ಅಲ್ಲಿ ನಾವು ಜೀಪನ್ನು ನಿಲ್ಲಿಸಿ ಮರೆಯಲ್ಲಿ ನಿಂತು ನೋಡಿದಾಗ ಸಾರ್ವಜನಿಕ ಸ್ಥಳದಲ್ಲಿ ಒಂದು ಶೆಡ್ನಲ್ಲಿ 1 ರೂ. ಗೆ 80/- ಲಾಭ ಮಾಡಿಕೊಡುತೇನೆ ಅಂತಾ ಅಂದು ಜನರನ್ನು ತನ್ನ ಕಡೆ ಆಕರ್ಷಣೆ ಮಾಡುತ್ತಿದ್ದನು. ಸದರಿ ಸ್ಥಳದಲ್ಲಿ 8 ರಿಂದ 9

ಜನರು ಇದ್ದರು. ನಾವು ರಾತ್ರಿ 08.20 ಗಂಟೆಗೆ ದಾಳಿ ಮಾಡಿ 9 ಜನರನ್ನು ಪರಿಶೀಲನೆ ಮಾಡಿದೆವು. 9 ಜನರ ಹೆಸರುಗಳು 1. ಶರಣಪ್ಪ ತಂದೆ ಹಣಮಂತ ಹಂದಿ, 2. ಲಕ್ಷ್ಮಣ, 3 ಅರ್ಜುನ,4. ವಿಶ್ವಕಾಂತ್, 5. ಪಾಷಾ,6. ಶಂಕರ್, 7. ಬಸವರಾಜ ಇರುತ್ತಾರೆ ಇನ್ನುಳಿದ ಎರಡು ಜನರು ಹೆಸರುಗಳು ನನಗೆ ನೆನಪಿಗೆ ಬರುತ್ತಿಲ್ಲ. ರಾತ್ರಿ 08.25 ರಿಂದ 9.00 ಗಂಟೆವರೆಗೆ ಜಪ್ತಿ ಪಂಚನಾಮೆಯನ್ನು ಮಾಡಿ ಸದರಿ ಸ್ಥಳದಿಂದ ನಗದು ಹಣ ರೂ. 40,110/-, 18 ಮಟಕಾ ಚೀಟಿ ಹಾಗೂ 9 ಬಾಲ್ ಪೆನ್ ಇವುಗಳನ್ನು ನಾನು ಜಪ್ತಿ ಪಡಿಸಿಕೊಂಡಿದ್ದೆ. ನಂತರ ಸದರಿ 9 ಜನರನ್ನು ದಸ್ತಗಿರಿ ಮಾಡಿಕೊಂಡು ಹಾಗೂ ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದು ಯಾದಗಿರಿ ನಗರದ ಪೋಲಿಸ್ ಠಾಣೆಗೆ ಹೋಗಿ ರಾತ್ರಿ 10.00 ಗಂಟೆಗೆ ಒಪ್ಪಿಸಿದ್ದೆ. ಮುಂದಿನ ತನಿಖೆಯನ್ನು ಅವರು ಮಾಡಿದ್ದರು. ಸಾಕ್ಷಿಯು ಜ್ಞಾಪನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ನಗದು ಹಣ ರೂ. 40,110/- ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು -1 ಎಂದು ಗುರುತಿಸಲಾಯಿತು, 18 ಅಂಕಿ ಸಂಖ್ಯೆಗಳ ಬರೆದ ಚೀಟಿಗಳನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು ಹಾಗೂ 9 ಬಾಲ್ ಪೆನ್ಗಳನ್ನು ನೋಡಿ ಗುರುತಿಸಿದ್ದು ಅವುಗಳನು ಒಟ್ಟಾಗಿ ಮುದ್ದೆಮಾಲು-3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು **1** ನೇ ಆರೋಪಿ ಪರ ವಕೀಲರಾದ ಃಶ್ರೀ. ಎಸ್.ಬಿ.ಜಿ. ರವರಿಂದಃ</u>

ನನ್ನ ಅಧೀಕ್ಷಕರು ನನಗೆ ಮಾಹಿತಿ ನೀಡಿದಾಗ ಸಂಜೆ 06.30 ಗಂಟೆ ಆಗಿತ್ತು. ಚಾಸಾ-2 ಮತ್ತು 3 ರವರಿಗೆ ಪಂಚರಾಗಲು ನಾನು ನೋಟಿಸನ್ನು ನೀಡಿರುವುದಿಲ್ಲ. ಚಾಸಾ-2 ಮತ್ತು 3 ರವರು ನಮ್ಮ ಕಚೇರಿಗೆ ಬಂದಾಗ ರಾತ್ರಿ 07.30 ಗಂಟೆ ಆಗಿತ್ತು. ಚಾಸಾ-2 ಮತ್ತು 3 ರವರು ಎಲ್ಲಿ ಇದ್ದರು ಎಂದರೆ ಸಾಕ್ಷಿಯು ಶಾಸ್ತ್ರೀ ಚೌಕ್‌ದಲ್ಲಿ ಅವರು ಇದ್ದರು ಎಂದು ಚಾಸಾ-6 ರವರು ನನಗೆ ತಿಳಿಸಿದ್ದರು. ನಾವೆಲ್ಲರು ರಾತ್ರಿ 08.00 ಗಂಟೆಗೆ ಕಚೇರಿಯನ್ನು ಬಿಟ್ಟೆವು ಹಾಗು ಅಲ್ಲಿ 08.10 ಗಂಟೆಗೆ ಇದ್ದೆವು. ನಮ್ಮ ಕಚೇರಿಯಿಂದ ಗುನ್ಹಾ ಸ್ಥಳಕ್ಕೆ ಹೋಗಲು ವಾಹನ ಸಂಚಾರ ಇರುವುದಿಲ್ಲ. ವಾತ್ಸಲ್ಯ ಆಸ್ಪತ್ರೆಯ ಹತ್ತಿರ ನಮ್ಮ ಜೀಪನ್ನು ನಿಲ್ಲಿಸಿ ಮರೆಯಲ್ಲಿ ನಿಂತಿದ್ದೆವು. ನಾವು ನಿಂತ ಸ್ಥಳದಿಂದ ಗುನ್ಹಾ ಸ್ಥಳವು ಎಷ್ಟು ಅಂತರ ಇತ್ತು ಎಂದರೆ ಸಾಕ್ಷಿಯು ಅರ್ಧ ಪರಲಂಗ್ ಇತ್ತು

ಎಂದು ಹೇಳುತ್ತಾರೆ. ನಾವು ವಾತ್ಸಲ್ಯ ಆಸ್ಪತ್ರೆಯ ಪಶ್ಚಿಮ ಭಾಗಕ್ಕೆ ವಾಹನವನ್ನು ನಿಲ್ಲಿಸಿದ್ದೆವು. ಗುನ್ನೆ ಸ್ಥಳದಲ್ಲಿ 10-15 ಜನರು ಇದ್ದರು ನಾವು ದಾಳಿ ಮಾಡಿದಾಗ ಅವರಲ್ಲಿ 9 ಜನರು ನಮಗೆ ಸಿಕ್ಕಿದ್ದರು. ಟಿನ್ ಶೆಡ್ ಇತ್ತು. ಟಿನ್ ಶೆಡ್ ಇರುವ ಕಾರಣ ಅದರಲ್ಲಿ ಎಷ್ಟು ಜನ ಜೂಜಾಟ ಆಡುತ್ತಿದ್ದರು ಎಂದು ನಮಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ವಾತ್ಸಲ್ಯ ಆಸ್ಪತ್ರೆಯವರು ಗುನ್ನಾ ಸ್ಥಳದಲ್ಲಿ ಜೂಜಾಟ ಆಡುತ್ತಿದ್ದಾರೆಂದು ನನಗೆ ಮಾಹಿತಿಯನ್ನು ನೀಡಿರಲಿಲ್ಲ ಹಾಗೂ ಅವರು ಪಂಚರು ಆಗುತೇನೆಂದು ಕೋರಿಕೊಂಡಿರಲಿಲ್ಲ. 1 ನೇ ಆರೋಪಿತನನ್ನು ದಸ್ತಗಿರಿ ಮಾಡಿದಾಗ ಆತನ ಬಳಿ ನಗದು ಹಣ ರೂ. 7200/- ಇತ್ತು. ಅವುಗಳ ಮುಖಬೆಲೆಯು 500 ನೋಟುಗಳ ಇದ್ದವು. ಶೋಧನಾ ವಾರೆಂಟ್ನು ನಾನು ಪಡೆದುಕೊಂಡಿರುವುದಿಲ್ಲ. ವಾತ್ಸಲ್ಯ ಆಸ್ಪತ್ರೆಯು ಮಕ್ಕಳ ಆಸ್ಪತ್ರೆ ಇರುತದೆ ಎಂದರೆ ಸರಿ. ಸದರಿ ಆಸ್ಪತ್ರೆಯ ಎದುರುಗಡೆ ಒಂದು ಕಿರಾಣಿ ಅಂಗಡಿ ಇರುತದೆ ಎಂದರೆ ಸರಿ. ಸದರಿ ಆಸ್ಪತ್ರೆಯ ಪಕ್ಕದಲ್ಲಿ ಒಂದು ಕಿರಾಣಿ ಅಂಗಡಿ ಇರುತದೆ ಎಂದರೆ ಸರಿ. ಸದರಿ ಆಸ್ಪತ್ರೆಯ ಎಡಗಡೆ ಒಂದು ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಹಿಟ್ಟಿನ ಗಿರಣಿವರೆಗೆ ತಲುಪುತ್ತದೆ ಎಂದರೆ ಸರಿ. ಸದರಿ ಆಸ್ಪತ್ರೆಯ ಎದುರುಗಡೆ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಗುನ್ನೆ ಸ್ಥಳದ ಪೂರ್ವ ದಿಕ್ಕಿನ ಕಡೆಗೆ ಟಿನ ಶೆಡನ ಬಾಗಿಲು ಇರುತ್ತದೆ. ಮುದ್ದೆಮಾಲು -3 ಯಾವ ಕಂಪನಿದು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ಜನರಲ್ಲಿ ಹಣ , ಪೆನ್ನು ಮತ್ತು ಹಾಳೆ ಇರುತ್ತವೆ ಎಂದರೆ ಸರಿ .

1 ನೇ ಆರೋಪಿತನ ಬಗ್ಗೆ ನಾನು ಖುದ್ದಾಗಿ ಪರಿಶೀಲನೆ ಮಾಡಿರುವುದಿಲ್ಲ. ಈ ಪ್ರಕರಣಕ್ಕು ಹಾಗೂ ಆರೋಪಿತನಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ. ಅಂಕಿ ಸಂಖೆಗಳಿಗೋಸ್ಕರ ಆರೋಪಿತರ ವಿರುದ್ಧ ನಾನು ಸುಳ್ಳು ದೂರುನ್ನು ನೀಡಿದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.